ಇಷ್ಟವಿರಲಿಲ್ಲ. ಹೀಗಾಗಿ ಹುಡುಗಿ ಅವಿವಾಹಿತೆಯಾಗಿಯೇ ಉಳಿದಳು. ಹೆತ್ತವರು ಸತ್ತಾಗ ಆ ಮನೆ ನಿರ್ಗತಿಕರ ಬೀಡಾಯಿತು.

ಒಂದು ದಿನ ಮನೆಯ ಇನ್ನೊಂದು ಹುಡುಗಿ ಬಿಳಿ ಇಲಿಯೊಂದನ್ನು ಕಂಡು ಬೆನ್ನಟ್ಟಿ ಹಿಡಿದಳು. ಇನ್ನೇನು ಅದನ್ನು ಕೊಲ್ಲಬೇಕೆಂಬಷ್ಟರಲ್ಲಿ ಮನೆಯ ಮುದುಕಿಯೊಬ್ಬಳು ಅವಳನ್ನು ತಡೆದಳು.

'ನೋಡು, ಅದು ಬಿಳಿ ಇಲಿ. ಅಂದ ಮೇಲೆ ಶ್ರೇಷ್ಠ ಜಾತಿಯದೇ. ಇಂಥದ್ದು ಇಡೀ ಜಿಲ್ಲೆಯಲ್ಲಿ ಬೇರೊಂದಿರಲಿಕ್ಕಿಲ್ಲ' ಅಂತ ಅಂದಳು ಮುದುಕಿ.

'ಇರಬಹುದು. ಆದರೆ ಇದು ಕಾಳುಕಡಿಯನ್ನು, ಬಟ್ಟೆಬರೆಯನ್ನು ಹಾಳು ಮಾಡೋದಿಲ್ಲ ಅಂತ ಹಾಗೆ ಹೇಳ್ತಿ?' ಇಲಿ ಹಿಡಿದಾಕೆ ಕೇಳಿದಳು.

ಮುದುಕಿಗೆ ಇಲಿಯನ್ನು ಬದುಕಿಸಿ ಇಟ್ಟುಕೊಳ್ಳುವಾಸೆ. 'ಕೊಡಿಲ್ಲಿ, ಅದನ್ನು ಎಲ್ಲಾದ್ರೂ ಬಿಟ್ಟು ಬರುತ್ತೇನೆ' ಎಂದಳು.

ಹುಡುಗಿ ಕೊಡಲಿಲ್ಲ. ಆದರೆ ಅವಳಿಗೂ ಅದರ ಬಗ್ಗೆ ಪ್ರೀತಿ ಬೆಳೆಯಿತು. ಎಲ್ಲೋ ಬಚ್ಚಿಟ್ಟು ಸಾಕತೊಡಗಿದಳು.

ಮುದುಕಿಗೆ ಒಂದು ದಿನ ಬಿಳಿ ಇಲಿ ಸಿಕ್ಕೇ ಬಿಟ್ಟಿತು. ದೂರ ಬಿಟ್ಟು ಬರಲು ನಿರ್ಧರಿಸಿ ಬೋನಿನಲ್ಲಿ ಹಾಕಿಕೊಂಡು ಮನೆಯಿಂದ ಹೊರಗೆ ಬಂದಳು. ಬಹಳ ದಿನಗಳ ನಂತರ ಮನೆಯಿಂದ ಹೊರಗೆ ಬಂದಿದ್ದ ಮುದುಕಿಗೆ ಮಜವೆನ್ನಿಸಿತು. ಸಂಜೆಯವರೆಗೂ ಹೊರಗೇ ತಿರುಗಾಡಿಕೊಂಡಿದ್ದಾಕೆಗೆ ಹೊಟ್ಟೆ ಹಸಿಯಿತು. ಚಳಿಯೂ ಅನಿಸತೊಡಗಿತು. ರಸ್ತೆ ಬಿಟ್ಟು ಹಾಳು ಗೋಡೆಯೊಂದರ ಚಾಚಿನಲ್ಲಿ ಕುಳಿತಳು.

'ಈಗೇನು ಮಾಡ್ಲಿ? ಮನೇಲಿ ಉಳಿದಿರೋದು ಆ ಕೂಗಣಿ ತೆಗಿಯೋ ಸಾಧನ ಮಾತ್ರ. ಅದನ್ನು ಮಾರಿದರೆ ಮಾತ್ರ ಒಂದೆರಡು ದಿನ ಊಟಕ್ಕೆ ಸಿಕ್ಕೀತು' ಎಂದು ಬೋನಿನಲ್ಲಿದ್ದ ಶ್ರೇಷ್ಠ ಇಲಿಯೊಂದಿಗೆ ಮಾತಾಡಿದಂತೆ ಹೇಳಿಕೊಂಡಳು. ತನ್ನ ಚಂಚಿಯಿಂದ ಕೂಗಣಿ ತೆಗೆಯುವ ಸಾಧನವನ್ನು ಹೊರಗೆ ತೆಗೆದು ದಿಟ್ಟಿಸಿ ನೋಡಿದಳು. ಆದರೆ ಕೈ ನಡುಗುತ್ತಿದ್ದುದ ಅದು ಹುಲ್ಲಿನಲ್ಲಿ ಬಿದ್ದು ಕಾಣದಂತಾಯಿತು. ಹುಡುಕುವ ಭರಾಟೆಯಲ್ಲಿ ಬೋನಿನ ಬಿರಡೆಗೆ ಅವಳ ಕೈ ತಾಗಿ, ಅದರ ಬಾಗಿಲು ತೆರೆಯಿತು. ಬಾಗಿಲು ತೆರೆದದ್ದೊಂದೇ ತಡ, ಇಲಿ ಟುಣ್ಣನೆ ಹೊರ ಜಿಗಿದು ಹುಲ್ಲಿನಲ್ಲಿ ಬಿದ್ದಿದ್ದ ಬೆಳ್ಳಿಯ ಸಾಧನವನ್ನು ಕಚ್ಚಿಕೊಂಡು ಓಡಿ ಗೋಡೆಯ ಬಿರುಕಿನಲ್ಲಿ ಸೇರಿ ಮರೆಯಾಯಿತು.

'ತುಂಟ ಇಲಿಯೇ, ಹೊರಗೆ ಬಾ, ನನ್ನ ಕೂಗಣಿ ಸಾಧನವನ್ನು ಮರಳಿ ಕೊಡು. ಅದು ಮಾತ್ರ ಈಗ ನನ್ನ ಬಳಿ ಉಳಿದಿರೋ ಬೆಲೆಬಾಳುವ ವಸ್ತು' ಅಂದಳು ಮುದುಕಿ.

ಹಾಗೆ ಮುದುಕಿ ಆ ಹಳೆಯ ಗೋಡೆಯ ಇಟ್ಟಿಗೆಗಳನ್ನು ಕೆಡವತೊಡಗಿದಳು. ಗೋಡೆ ಬಿದ್ದು ಅಲ್ಲೊಂದು ಹೊಂಡವಾಯಿತು. ಮುದುಕಿ ಬಾಗಿ ಹೊಂಡದೊಳಕ್ಕೆ ಇಣುಕಿದಳು.

ಒಳಗೆ ಒಂದು ಚಿನ್ನದ ಪಾತ್ರೆ, ಅದರ ತುಂಬ ಬೆಲೆ ಬಾಳುವ ವಜ್ರಗಳು. 'ಒಂದು ಬೆಳ್ಳಿಯ ಕಡ್ಡಿ ಕಚ್ಚಿಕೊಂಡು ಹೋಗಿ ಇಷ್ಟೆಲ್ಲಾ ಕೊಟ್ಟೆಯಲ್ಲ. ಶ್ರೇಷ್ಠ ಇಲಿಯೇ!' ಎಂದು ಮುದುಕಿ ಕುಣಿದಾಡಿಬಿಟ್ಟಳು.

ಚೀನಾದಲ್ಲಿ ಇಂದಿಗೂ ಕೆಲ ರೈತರು ಬಿಳಿ ಇಲಿಯನ್ನು ಅದು 'ಅದೃಷ್ಟ ದೇವತೆ' ಎಂಬ ಕಾರಣದಿಂದ ಹೊಡೆಯುವ ಗೋಜಿಗೆ ಹೋಗುವುದಿಲ್ಲ.

✿

